## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಾಗೇಪಲ್ಲಿ.

## ಸಿ.ಸಿ. ಸಂಖ್ಯೆ:264/2020

| | |
|---|---|
| ಫ್ರಾಸಾ | 6 |
| ಚಾಸಾ | 6 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 18.02.2026.**

ಸಾಕ್ಷಿಯ ಹೆಸರು : ತೇಜೋವತಿ ಎಂ.ಎಸ್.

ತಂದೆಯ/ಗಂಡನ ಹೆಸರು : ಮಹದೇವಪ್ಪ
ವಯಸ್ಸು : 55 ವರ್ಷ
ಉದ್ಯೋಗ : ವೈದ್ಯರು
ವಾಸಸ್ಥಳ : ಗೌರಿಬಿದನೂರು

**(ಆರೋಪಿಯು ಗೈರುಹಾಜರಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತು ಪತ್ತೆಗೆ ತಕರಾರು ಇಲ್ಲವೆಂದು ನುಡಿದಿದ್ದು, ಆದುದರಿಂದ ಸಾಕ್ಷ್ಯ ವಿಚಾರಣೆಗೆ ಅನುಮತಿ ನೀಡಲಾಯಿತು.)**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದಃ**

ದಿಃ 2015 ಸೆಪ್ಟಂಬರ್ ರಿಂದ ಆಗಸ್ಟ್ 2023 ರವರೆಗೆ ಬಾಗೇಪಲ್ಲಿ ತಾಲ್ಲೂಕು ಆಸ್ಪತ್ರೆಯಲ್ಲಿ ಅರವಳಿಕೆ ತಜ್ಞರಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿಃ 18.05.2019 ರಂದು ರಾತ್ರಿ 8.30 ರ ಸಮಯದಲ್ಲಿ ಚಾಸಾ-1 ರವರು ಆಸ್ಪತ್ರೆಗೆ ಹಾಜಾರಾಗಿ, ಹಲ್ಲೆಯ ಸಂಬಂಧ ಆಕೆಯನ್ನು ಹಳ್ಳಿಯ ಜನರು ಕರೆದುಕೊಂಡು ಬಂದಿರುತ್ತಾರೆ. ಆಕೆಗೆ ಆರೋಪಿತರು ದೊಣ್ಣೆಯಿಂದ ಸಂಜೆ 5.45 ರ ಸಮಯದಲ್ಲಿ ಹೊಲದ ಬಳಿ ಹಲ್ಲೆ ಮಾಡಿರುವುದಾಗಿ ಮಾಹಿತಿ ನೀಡಿರುತ್ತಾರೆ. ಅವರನ್ನು

ಪರೀಕ್ಷಿಸಿದಾಗ ಎದೆಯ ಮುಂಭಾಗ ನೋವು ತುಂಬಿದ ಗಾಯವಾಗಿದ್ದು, ಸದರಿ ಗಾಯ ಸಾಧಾರಣ ಸ್ವರೂಪದ್ದಾಗಿರುತ್ತದೆ. ಸದರಿ ಸಂಬಂಧ 03.06.2020 ರಂದು ಈಗ ತೋರಿಸಿದ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ.

ಮಚ್ಚಿನಿಂದ ಹೊಡೆದಾಗ ಈ ರೀತಿ ಗಾಯಗಳಾಗುತ್ತವೆ ಎಂದರೆ ಸರಿ.

**ಪಾಟೀ ಸವಾಲು : ಶ್ರೀ ಆರ್. ಜೆ. ವಕೀಲರಿಂದ, ಆರೋಪಿತರ ಪರವಾಗಿಃ**

ನೋವು ತುಂಬಿದ ಗಾಯವಾಗಿದ್ದು, ಹಾಗಾಗಿ ಗಾಯದ ವಯಸ್ಸು ಬರೆದಿಲ್ಲ . ಎದೆ ನೋವು ಇದ್ದಾಗ, ನಿಪಿ-4 ರಲ್ಲಿರುವ ನೋವು ಕಂಡು ಬರುತ್ತದೆ ಎಂದರೆ ಸರಿ. ಚಾಸಾ-1 ರವರು ಆ ದಿನ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬಾಗೇಪಲ್ಲಿ.